

بسم اللهِ الرّحمٰنِ الرّحيم

# ಹಝ್ರತ್ ಮಸೀಹ್ ಮೌಊದ್(ಅ)ರ ಆರಾಧನೆ ಮತ್ತು ದೈವಿಕ ಪ್ರೇಮದ ವಿವರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **13-02-2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّآ إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ಜೀವನ ಮಾದರಿಯನ್ನು ಅತ್ಯಂತ ಪರಿಪೂರ್ಣವಾಗಿ ಅನುಸರಿಸಿದ ದೃಶ್ಯವು ಈ ಯುಗದಲ್ಲಿ ಅವರ ಸತ್ಯಸಂಧ ಸೇವಕರಾದ ಹಝ್ರತ್ ಮಸೀಹ್ ಮೌಊದ್(ಅ)ರಲ್ಲಿ ನಮಗೆ ಕಂಡುಬರುತ್ತದೆ. ಹಝ್ರತ್ ಪೈಗಂಬರ್(ಸ)ರ ಆರಾಧನೆ ಮತ್ತು ಅದಕ್ಕೆ ಸಂಬಂಧಿಸಿದ ಉಪದೇಶಗಳನ್ನು ಕಳೆದ ಖುತ್ಬಗಳಲ್ಲಿ ವಿವರಿಸಲಾಗಿತ್ತು.

ಇಂದು ನಾನು ಹಝ್ರತ್ ಪೈಗಂಬರ್(ಸ)ರ ಸಂಪೂರ್ಣ ಅನುಸರಣೆಯಲ್ಲಿ ನಮಗೆ ಕಾಣಬಹುದಾದ ಹಝ್ರತ್ ಮಸೀಹ್ ಮೌಊದ್(ಅ)ರ ಆರಾಧನೆಯ ಘಟನೆಗಳನ್ನು ಪ್ರಸ್ತುತಪಡಿಸುತ್ತೇನೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹಝ್ರತ್ ಮಿರ್ಝಾ ಮುಹಮ್ಮದ್ ದೀನ್ ಸಾಹಿಬ್(ರ)ರಿಂದ ವರದಿ ಮಾಡುತ್ತಾರೆ: "ನಾನು ನನ್ನ ಬಾಲ್ಯದಿಂದಲೇ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನೋಡುತ್ತಾ ಬಂದಿದ್ದೇನೆ. ಮೊಟ್ಟಮೊದಲಾಗಿ ನಾನು ತುಂಬಾ ಚಿಕ್ಕವನಾಗಿದ್ದಾಗ ಹಝ್ರತ್ ಮಿರ್ಝಾ ಗ್ರುಲಾಮ್ ಮುರ್ತಝ ಸಾಹಿಬ್‌ರ ಜೀವಿತಾವಧಿಯಲ್ಲಿ ಅವರನ್ನು ನೋಡಿದ್ದೆ. ಅವರ ಅಭ್ಯಾಸವೇನೆಂದರೆ, ರಾತ್ರಿ ಇಶಾ ನಮಾಝ್ ನಂತರ ಬೇಗನೆ ಮಲಗುತ್ತಿದ್ದರು ಮತ್ತು ರಾತ್ರಿ ಒಂದು ಗಂಟೆಯ ಸುಮಾರಿಗೆ ತಹಜ್ಜುದ್ ನಮಾಝ್‌ಗಾಗಿ ಏಳುತ್ತಿದ್ದರು. ತಹಜ್ಜುದ್ ನಿರ್ವಹಿಸಿದ ನಂತರ ಪವಿತ್ರ ಖುರ್‌ಆನ್ ಓದುತ್ತಿದ್ದರು. ಬೆಳಗಿನ ಅಝಾನ್ ಆಗುವಾಗ ಮಸೀದಿಗೆ ಹೋಗಿ ಜಮಾಅತ್‌ನೊಂದಿಗೆ ನಮಾಝ್ ನಿರ್ವಹಿಸುತ್ತಿದ್ದರು. ಕೆಲವೊಮ್ಮೆ ಅವರೇ ನಮಾಝಿಗೆ ಇಮಾಮತ್ ವಹಿಸುತ್ತಿದ್ದರು, ಕೆಲವೊಮ್ಮೆ ಮಸೀದಿಯ ಇಮಾಮ್ ಮಿಯಾನ್ ಜಾನ್ ಮುಹಮ್ಮದ್ ಇಮಾಮತ್ ವಹಿಸುತ್ತಿದ್ದರು. ಅವರು ಮಸೀದಿಯಲ್ಲಿ ಸುನ್ನತ್ ನಮಾಝ್ ಅನುಷ್ಠಿಸುವುದನ್ನು ನಾನು ನೋಡಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನಾನು ಎಂದೂ ಕಷ್ಟಕರವಾದ ತಪಸ್ಸುಗಳನ್ನು ಮಾಡಿಲ್ಲ ಮತ್ತು ಇಂದಿನ ಕೆಲವು ಸೂಫಿಗಳಂತೆ ನನ್ನ ಆತ್ಮವನ್ನು ಕಠಿಣವಾದ ಪ್ರಯಾಸಗಳಿಗೆ ಒಳಪಡಿಸಲಿಲ್ಲ ಹಾಗೂ ಸುನ್ನತ್‌ಗೆ ವಿರುದ್ಧವಾದ ರೀತಿಯ ಚಿಲ್ಲಾವನ್ನೂ (ನಲ್ವತ್ತು ದಿನಗಳ ಏಕಾಂತ ವಾಸ) ಮಾಡಿಲ್ಲ ಮತ್ತು ಅಲ್ಲಾಹನ ವಚನಕ್ಕೆ ವಿರುದ್ಧವಾದ ಯಾವುದೇ ಸನ್ಯಾಸತ್ವದ ಕೃತ್ಯವನ್ನೂ ಮಾಡಿಲ್ಲ.

(ಹುಝೂರ್ ಹೇಳಿದರು:) ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ತಂದೆಯ ನಿಧನದ ಸಮೀಪದ ದಿನಗಳಲ್ಲಿ ತಮ್ಮ ಆರಾಧನೆಯ ಒಂದು ಘಟನೆಯನ್ನು ವಿಶದವಾಗಿ ವಿವರಿಸಿದ್ದಾರೆ. ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ಕನಸಿನಲ್ಲಿ ಒಬ್ಬ ಹಿರಿಯ ವ್ಯಕ್ತಿಯನ್ನು ಕಂಡರು. "ಆಕಾಶೀಯ ಪ್ರಕಾಶಗಳನ್ನು ಗಳಿಸಲು ಸ್ವಲ್ಪ ಪ್ರಮಾಣದಲ್ಲಿ ಉಪವಾಸ ಮಾಡುವುದು ಪ್ರವಾದಿ ಕುಟುಂಬದ ಸುನ್ನತ್ ಆಗಿದೆ" ಎಂದು ಆ ಹಿರಿಯ ವ್ಯಕ್ತಿ ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಆದ್ದರಿಂದ ನಾನು ಕೆಲವು ದಿನಗಳ ವರೆಗೆ ಉಪವಾಸ ಮಾಡುವುದು ಸೂಕ್ತವೆಂದು ಭಾವಿಸಿದೆ. ಆದರೆ ಈ ವಿಷಯವನ್ನು ಗುಪ್ತವಾಗಿಡುವುದು ಉತ್ತಮ ಎಂದು ನಿರ್ಧರಿಸಿ, ನಾನು ಮನೆಯಿಂದ ಊಟವನ್ನು ತರಿಸಿ, ಅದನ್ನು ಯಾರಿಗೂ ತಿಳಿಯದಂತೆ ಕೆಲವು ಅನಾಥ ಮಕ್ಕಳಿಗೆ ಹಂಚುತ್ತಿದ್ದೆ." "ಅಲ್ಲಾಹನಿಗೆ ಹೊರತುಪಡಿಸಿ ಬೇರೆ ಯಾರಿಗೂ ಈ ಉಪವಾಸಗಳ ಬಗ್ಗೆ ತಿಳಿದಿರಲಿಲ್ಲ. ಅನಂತರ ಎರಡು-ಮೂರು ವಾರಗಳ ಬಳಿಕ ನಾನು ನನ್ನ ಆಹಾರವನ್ನು ಇನ್ನಷ್ಟು ಕಡಿಮೆ ಮಾಡಿದೆ ಮತ್ತು ಇಡೀ ದಿನದಲ್ಲಿ ಕೇವಲ ಒಂದು ರೊಟ್ಟಿಯನ್ನು ಮಾತ್ರ ತಿನ್ನುತ್ತಿದ್ದೆ. ಅನಂತರ ಆಹಾರವನ್ನು ಮತ್ತಷ್ಟು ಕಡಿಮೆ ಮಾಡುತ್ತಾ ಹೋದೆ. ಕೊನೆಗೆ ಎರಡು-ಮೂರು ತಿಂಗಳ ಮಗುವಿಗೆ ಕೂಡ ಸಾಕಾಗದಷ್ಟು ಆಹಾರವನ್ನು ಮಾತ್ರ ಸೇವಿಸಲು ಆರಂಭಿಸಿದೆ. ನಾನು ಎಂಟು-ಒಂಬತ್ತು ತಿಂಗಳುಗಳ ಕಾಲ ಈ ರೀತಿ ಉಪವಾಸಗಳನ್ನು ಅನುಷ್ಠಿಸಿದೆ."

ಆ ಸಮಯದಲ್ಲಿ ಉಪವಾಸದ ಅದ್ಭುತಗಳಲ್ಲಿ ಅನೇಕ ವಿಷಯಗಳು ಹಝ್ರತ್ ಮಸೀಹ್ ಮೌಊದ್(ಅ)ರ ಅನುಭವಕ್ಕೆ ಬಂದವು. ಅವರು ಹೇಳುತ್ತಾರೆ: "ಈ ಉಪವಾಸಗಳ ಫಲವಾಗಿ ನನಗೆ ಅನೇಕ ಪ್ರವಾದಿಗಳ ಮತ್ತು ಸಂತರ (ಔಲಿಯಾ)

ದರ್ಶನವಾಯಿತು. ಒಂದು ಬಾರಿ ಎಚ್ಚರದ ಸ್ಥಿತಿಯಲ್ಲೇ ನಾನು ರಸೂಲುಲ್ಲಾಹ್(ಸ)ರನ್ನು ಹಸನ್(ರ) ಮತ್ತು ಹುಸೈನ್(ರ)ರನ್ನು ಅಲಿ(ರ) ಮತ್ತು ಫಾತಿಮಾ(ರ)ರೊಂದಿಗೆ ಕಂಡೆನು. ಅದು ಕನಸಾಗಿರಲಿಲ್ಲ, ಬದಲಾಗಿ ಅದು ಒಂದು ಜಾಗೃತದರ್ಶನವಾಗಿತ್ತು."

(ಹುಝೂರ್ ಹೇಳಿದರು:) ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಮಸೀಹ್ ಮೌಊದ್(ಅ) ಒಮ್ಮೆ ಮಹಡಿಯ ಮೇಲಿಂದ ಬಿದ್ದರು. ಪ್ರಜ್ಞೆ ಬಂದ ತಕ್ಷಣ, "ನಮಾಝಿನ ಸಮಯವಾಯಿತೇ?" ಎಂದು ಕೇಳಿದರು. ಅಂದರೆ ನಮಾಝಿನ ಕುರಿತು ಅವರಿಗೆ ಅಷ್ಟು ಪ್ರೀತಿ ಇತ್ತು. 1895ರಲ್ಲಿ ಹಝ್ರತ್ ಮೀರ್ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್(ರ)ರಿಗೆ ರಮಝಾನ್ ತಿಂಗಳಲ್ಲಿ ಖಾದಿಯಾನ್‌ನಲ್ಲಿ ಇರುವ ಸೌಭಾಗ್ಯ ಲಭಿಸಿತು. ಅವರು ತಿಂಗಳು ಪೂರ್ತಿ ತಹಜ್ಜುದ್ ಅಂದರೆ ತರಾವೀಹ್ ನಮಾಝನ್ನು ಹಝ್ರತ್ ಮಸೀಹ್ ಮೌಊದ್(ಅ)ರ ಹಿಂದೆ ನಿರ್ವಹಿಸಿದರು. ಅವರು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ವಿತ್ರ್ ನಮಾಝನ್ನು ರಾತ್ರಿಯ ಮೊದಲ ಭಾಗದಲ್ಲೇ ನಿರ್ವಹಿಸುತ್ತಿದ್ದರು ಮತ್ತು ತರಾವೀಹ್ ನಮಾಝನ್ನು ರಾತ್ರಿಯ ಕೊನೆಯ ಭಾಗದಲ್ಲಿ ಎರಡೆರಡು ರಕ್‌ಅತ್‌ಗಳಾಗಿ ನಿರ್ವಹಿಸುತ್ತಿದ್ದರು."

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹಝ್ರತ್ ಅಮ್ಮಾ ಜಾನ್(ರ)ರಿಂದ ವರದಿ ಮಾಡುತ್ತಾರೆ: "ಹಝ್ರತ್ ಮಸೀಹ್ ಮೌಊದ್(ಅ) ಐದು ಹೊತ್ತಿನ ನಮಾಝ್ ಅಲ್ಲದೆ ಎರಡು ರೀತಿಯ ನಫಲ್ ನಮಾಝ್ ನಿರ್ವಹಿಸುತ್ತಿದ್ದರು. ಒಂದು, ಇಶ್ರಾಕ್ ನಮಾಝ್. ಇದನ್ನು ಅವರು ಕೆಲವೊಮ್ಮೆ ನಿರ್ವಹಿಸುತ್ತಿದ್ದರು. ಎರಡನೆಯದು ತಹಜ್ಜುದ್ ನಮಾಝಿನ ಎಂಟು ರಕ್‌ಅತ್‌ಗಳು, ಇದನ್ನು ಅವರು ಯಾವಾಗಲೂ ನಿರ್ವಹಿಸುತ್ತಿದ್ದರು, ತುಂಬಾ ಅನಾರೋಗ್ಯವಾಗಿರುವ ಸ್ಥಿತಿಯಲ್ಲಿ ಮಾತ್ರ ಬಿಡುತ್ತಿದ್ದರು. ಆದರೆ ಅಂತಹ ಸಂದರ್ಭದಲ್ಲೂ ಅವರು ಹಾಸಿಗೆಯ ಮೇಲೆ ಮಲಗಿಯೇ ದುಆ ಮಾಡುತ್ತಿದ್ದರು. ಅಂತಿಮ ವಯಸ್ಸಿನಲ್ಲಿ ದೌರ್ಬಲ್ಯದ ಕಾರಣದಿಂದ ಕುಳಿತುಕೊಂಡು ದುಆ ಮಾಡುತ್ತಿದ್ದರು."

ಹಝ್ರತ್ ಮೌಲವಿ ಯಾಕೂಬ್ ಅಲಿ ಸಾಹಿಬ್(ರ) ಬರೆಯುತ್ತಾರೆ: "ತನ್ನ ತಂದೆಯ ಆದೇಶದ ಪಾಲನೆಯ ಉದ್ದೇಶದಿಂದ ಮಾತ್ರ ಹಝ್ರತ್ ಮಸೀಹ್ ಮೌಊದ್(ಅ) ಮೊಕದ್ದಮೆಗೆ ಸಂಬಂಧಪಟ್ಟು ನ್ಯಾಯಾಲಯಕ್ಕೆ ಹೋಗುತ್ತಿದ್ದರು. ಅಲ್ಲಿಯೂ ಅವರು ಯಾವ ನಮಾಝ್ ಕೂಡ ಬಿಟ್ಟುಹೋಗದಂತೆ ಎಚ್ಚರವಹಿಸುತ್ತಿದ್ದರು."

ಹಝ್ರತ್ ಮಸೀಹ್ ಮೌಊದ್(ಅ)ರ ಸ್ವರದಲ್ಲಿ ಬಹಳ ನೋವು ಮತ್ತು ಲಯವಿತ್ತು. ಅವರ ಖುರ್‌ಆನ್ ಪಾರಾಯಣ ರಮ್ಯವಾಗಿತ್ತು. ಅವರಿಗೆ ಪವಿತ್ರ ಖುರ್‌ಆನ್ ಮತ್ತು ರಸೂಲ್(ಸ)ರ ಸುನ್ನತ್ ಮೇಲೆ ಅಪಾರ ಪ್ರೀತಿಯಿತ್ತು. ಅವರ ಆರಾಧನೆಗಳು ಎಂದಿಗೂ ರಸೂಲ್(ಸ)ರ ಅನುಸರಣೆಯನ್ನು ಮೀರುತ್ತಿರಲಿಲ್ಲ. ನಮಾಝ್ ಅಲ್ಲದೆ ಅವರ ದಿನನಿತ್ಯದ ಕಾರ್ಯಗಳಲ್ಲಿ ಪವಿತ್ರ ಖುರ್‌ಆನ್ ಪಾರಾಯಣ, ದುರೂದ್ ಶರೀಫ್ ಮತ್ತು ಇಸ್ತಿಗ್‌ಫಾರ್ ಸೇರಿತ್ತು. ಪವಿತ್ರ ಖುರ್‌ಆನ್ ಮೇಲಂತೂ ಅವರಿಗೆ ಬಹಳ ಪ್ರೀತಿಯಿತ್ತು. ಹಗಲು ರಾತ್ರಿ, ಏಳುವಾಗ, ಕುಳಿತುಕೊಳ್ಳುವಾಗ ಮತ್ತು ನಡೆದಾಡುವಾಗ ಪವಿತ್ರ ಖುರ್‌ಆನ್ ಓದುತ್ತಿದ್ದರು ಮತ್ತು ಬಿಕ್ಕಿ ಬಿಕ್ಕಿ ಅಳುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಮಸೀದಿಗೆ ಹೋಗಲು ಸಾಧ್ಯವಾಗದಿದ್ದಾಗ, ಮನೆಯಲ್ಲೇ ಜಮಾಅತಾಗಿ ನಮಾಝ್ ನಿರ್ವಹಿಸುತ್ತಿದ್ದರು ಮತ್ತು ಅಂತಹ ಸಂದರ್ಭಗಳಲ್ಲಿ ಹಝ್ರತ್ ಅಮ್ಮಾ ಜಾನ್‌ರನ್ನು ಜೊತೆಗೆ ಸೇರಿಸಿಕೊಳ್ಳುತ್ತಿದ್ದರು.

ಹಝ್ರತ್ ಶೇಖ್ ಯಾಕೂಬ್ ಅಲಿ ಇರ್ಫಾನಿ ಸಾಹಿಬ್(ರ) ಹಝ್ರತ್ ಮಸೀಹ್ ಮೌಊದ್(ಅ)ರ ಬಾಲ್ಯದ ಬಗ್ಗೆ ವರದಿ ಮಾಡುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ವಯಸ್ಸಿನ ಹುಡುಗಿಯೊಬ್ಬಳಿಗೆ (ಮುಂದೆ ಅವರೊಂದಿಗೆ ಅವರ ವಿವಾಹವಾಗಿತ್ತು) ಹೀಗೆ ಹೇಳುತ್ತಿದ್ದರು: "ಅಭಾಗಿಯೇ! ಅಲ್ಲಾಹನು ನನಗೆ ನಮಾಝ್ ನಿರ್ವಹಿಸುವ ಸೌಭಾಗ್ಯ ದಯಪಾಲಿಸಲಿ ಎಂದು ನನಗಾಗಿ ದುಆ ಮಾಡು." ಬಾಲ್ಯದಿಂದಲೇ ಅವರ ಭಾವನೆಗಳು ಅತ್ಯಂತ ಪವಿತ್ರವಾಗಿದ್ದವು ಎಂದು ಈ ವಾಕ್ಯದಿಂದ ತಿಳಿದುಬರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ನಾನು ಬಾಲ್ಯದಿಂದಲೇ ಉಪವಾಸ ಅನುಷ್ಠಿಸುವ ಅಭ್ಯಾಸ ಹೊಂದಿದ್ದೆ... ನಾನು (ಬಾಲ್ಯದಲ್ಲಿ) ಇಪ್ಪತ್ತೊಂಬತ್ತು ಉಪವಾಸಗಳನ್ನು ಪೂರ್ಣಗೊಳಿಸಿದ ದಿನವು ನನ್ನ ಸಂತೋಷದ ಈದ್ ಹಬ್ಬ ದಿನವಾಗಿತ್ತು. ಉಪವಾಸದಲ್ಲಿ ವಿಶೇಷ ಅನುಗ್ರಹಗಳು ಇರುತ್ತವೆ. ಪ್ರತಿಯೊಂದು ಹಣ್ಣಿಗೆ ವಿಶಿಷ್ಟವಾದ ರುಚಿ ಇರುವ ಹಾಗೆಯೇ ಪ್ರತಿಯೊಂದು ಆರಾಧನೆಯಲ್ಲೂ ಒಂದು ಪ್ರತ್ಯೇಕ ಆನಂದವಿರುತ್ತದೆ. ಮನುಷ್ಯನಿಗೆ ವಿವರಿಸಲು ಸಾಧ್ಯವಿಲ್ಲದಂತಹ ಆಧ್ಯಾತ್ಮಿಕತೆ ಈ ಆರಾಧನೆಗಳಲ್ಲಿ ಇರುತ್ತವೆ. ಆರಾಧನೆಯಲ್ಲಿ ಮನುಷ್ಯನ ಆತ್ಮವು ಅತ್ಯಂತ ಮೃದುವಾಗಿ, ನೀರಿನಂತೆ ಹರಿದು ಅಲ್ಲಾಹನೊಂದಿಗೆ ಲೀನವಾಗುವಂತಿರಬೇಕು."

ಮಿಯಾನ್ ಜಾನ್ ಮುಹಮ್ಮದ್ ಮರ್ಹೂಮ್(ರ)ರ ಜನಾಝ ನಮಾಝ್ ಬಗ್ಗೆ ಹಝ್ರತ್ ಪೀರ್ ಸಿರಾಜುಲ್ ಹಕ್ ನುಅಮಾನಿ ಸಾಹಿಬ್(ರ) ವರದಿ ಮಾಡುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಅವರ ಮೇಲೆ ಅಪಾರ ಪ್ರೀತಿಯಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಸ್ವತಃ ಅವರ ಜನಾಝ ನಮಾಝಿಗೆ ಇಮಾಮತ್ ವಹಿಸಿದರು. ನಮಾಝ್‌ನಲ್ಲಿ ಎಷ್ಟು

ಸಮಯ ತೆಗೆದುಕೊಂಡರೆಂದರೆ, ಹಿಂದೆ ನಿಂತಿದ್ದವರ ಕಾಲುಗಳು ನೋಯಲಾರಂಭಿಸಿದವು. ನಿಂತು ನಿಂತು ನನ್ನ ಸ್ಥಿತಿ ಹದಗೆಟ್ಟಿತು. ಜನಾಝ ನಮಾಝ್ ಮುಗಿಸಿ ಬಂದ ನಂತರ ಯಾರೋ ಒಬ್ಬರು ಹೀಗೆ ಹೇಳಿದರು: ಹುಝೂರ್, ಇಂದು ನಮಾಝ್ ಬಹಳ ದೀರ್ಘವಾಗಿದ್ದ ಕಾರಣದಿಂದ ನಮಗೆ ಸುಸ್ತಾಯಿತು. ನಿಮ್ಮ ಸ್ಥಿತಿಯೂ ಕಷ್ಟಕರವಾಗಿರಬಹುದು'. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: "ನಮಗೆ ಹೇಗೆ ಸುಸ್ತಾಗಲು ಸಾಧ್ಯ? ನಾವು ಅಲ್ಲಾಹನೊಡನೆ ದುಆ ಮಾಡುತ್ತಿದ್ದೆವು, ಆ ದಿವಂಗತ ವ್ಯಕ್ತಿಗಾಗಿ ಕ್ಷಮೆ ಬೇಡುತ್ತಿದ್ದೆವು. ಬೇಡುವವನು ಎಂದಾದರೂ ಸುಸ್ತಾಗುತ್ತಾನೆಯೇ? ಯಾರು ಸುಸ್ತಾಗುತ್ತಾರೋ ಅವರು ಹಿಂದೆ ಉಳಿಯುತ್ತಾರೆ. ನಾವು ಬೇಡುವವರು ಆಗಿದ್ದೇವೆ ಮತ್ತು ಅವನು (ಅಲ್ಲಾಹನು) ನೀಡುವವನು ಆಗಿರುವನು. ಹಾಗಿದ್ದ ಮೇಲೆ ಸುಸ್ತಾಗಲು ಹೇಗೆ ಸಾಧ್ಯ? ಸ್ವಲ್ಪವಾದರೂ ಸಿಗುವ ಪ್ರತೀಕ್ಷೆ ಇರುವ ಜಾಗದಲ್ಲಿ ಭಿಕ್ಷುಕನು ಹಠ ಹಿಡಿದು ನಿಲ್ಲುತ್ತಾನೆ."

(ಹುಝೂರ್ ಹೇಳಿದರು:) ಅಲ್ಲಾಹನು ನಮಗೂ ಇದೇ ಯೋಚನೆಯೊಂದಿಗೆ ನಮಾಝ್ ನಿರ್ವಹಿಸುವ ಸೌಭಾಗ್ಯ ದಯಪಾಲಿಸಲಿ. ಅಲ್ಲಾಹ್ ಮತ್ತು ಅವನ ರಸೂಲರ(ಸ) ಆಜ್ಞೆಯಂತೆ ನಮಾಝ್ ನಿರ್ವಹಿಸುತ್ತೇವೆ ಮತ್ತು ಅಲ್ಲಾಹನ ಉಪಕಾರಗಳನ್ನು ಸ್ಮರಿಸುತ್ತಾ ಅವನನ್ನು ಸ್ತುತಿಸುತ್ತಾ ನಮಾಝ್ ನಿರ್ವಹಿಸುತ್ತೇವೆ ಎಂಬ ನಿಬಂಧನೆಯೊಂದಿಗೆ ನಾವು ಹಝ್ರತ್ ಮಸೀಹ್ ಮೌಊದ್(ಅ)ರ ಕೈಯಲ್ಲಿ ಬೈಅತ್ ಮಾಡಿದ್ದೇವೆ. ಅಲ್ಲಾಹನು ನಮಗೆ ಈ ಪ್ರತಿಜ್ಞೆಯನ್ನು ಪೂರೈಸುವ ಶಕ್ತಿ ನೀಡಲಿ.

ಖುತ್ಬದ ಕೊನೆಯಲ್ಲಿ ಹುಝೂರ್ ಇಬ್ಬರು ದಿವಂಗತರ ಕುರಿತು ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗ಼ಾಯಿಬ್ ನಮಾಝ್ ನಿರ್ವಹಿಸುವುದಾಗಿ ಹೇಳಿದರು ಹಾಗೂ ದಿವಂಗತರ ಮಗ಼್‌ಫಿರತ್ ಮತ್ತು ಅವರ ಪದವಿಗಳ ಉನ್ನತಿಗಾಗಿ ದುಆ ಮಾಡಿದರು.

————————————*****————————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis**(atba)*

At, ***'Masjid Mubarak',*** *Islamabad, Tilford,* U.K. On 13-02-2026

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon